ಕುಂದಾಪುರ ತಾಲ್ಲೂಕಿನಲ್ಲಿ ಪಹಣಿ ಪತ್ರಿಕೆಗಳ ವಿತರಣೆ

310 (2505) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿರುವ ಪಹಣಿ ಪತ್ರಿಕೆಗಳ ಸಂಖ್ಯೆ ಎಷ್ಟು;

ಆ) ಸಾರ್ವಜನಿಕರು ಪಹಣಿ ಪತ್ರಿಕೆ ಪಡೆಯಲು ತಾಲ್ಲೂಕು ಕಛೇರಿಯ ಕಂಪ್ಯೂಟರ್ ಕೇಂದ್ರದ ಎದುರು ಸರದಿ ನಿಲ್ಲುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ತಾಲ್ಲೂಕಿನಲ್ಲಿ ಅಗತ್ಯವಿದ್ದ ಹಣಕಾಸು ಲಭ್ಯವಿದ್ದಾಗ್ಯೂ ಹೋಬಳಿಗೊಂಡದಂತೆ ಪ್ರತ್ಯೇಕ ಕಂಪ್ಯೂಟರ್ ಒದಗಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಆದೇಶಿಸಬಹುದೆ;

ಈ) ಇಲ್ಲದಿದ್ದಲ್ಲಿ, ಇರುವ ತೊಡಕುಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) 3.09 ಲಕ್ಷ ಪಹಣಿ ಪತ್ರಿಕೆಗಳು

ಆ) ಹೌದು. ಕೆಲವು ಸಂದರ್ಭದಲ್ಲಿ ರೈತರು 15-20 ನಿಮಿಷಗಳ ಸರದಿ ಕಾಯಬೇಕಾಗುತ್ತದೆ. ಕಾರ್ಯಭಾರದ ಒತ್ತಡದ ಸಮಯದಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಗಣಕಯಂತ್ರವನ್ನು ಮತ್ತು ಪ್ರಿಂಟರ್‌ನ್ನು ಬಾಡಿಗೆಗೆ ತೆಗೆದುಕೊಂಡು ಹೆಚ್ಚಿನ ಕಿಯಾಸ್ಕ್‌ನ್ನು ಅಳವಡಿಸಿ ರೈತರಿಗೆ ಪಹಣಿ ಪತ್ರವನ್ನು ನೀಡಲಾಗುತ್ತದೆ.

ಇ) ಇಲ್ಲ.

ಈ) ಸರ್ಕಾರವು ಖಾಸಗಿಯವರ ಸಹಭಾಗಿತ್ವದೊಂದಿಗೆ ಈ ಯೋಜನೆಯನ್ನು ವಿಕೇಂದ್ರಿಕರಣಗೊಳಿಸಲು ಯೋಜಿಸಲಾಗುತ್ತಿದೆ. ಆದಷ್ಟು ಬೇಗನೆ ವಿಕೇಂದ್ರಿಕರಣಗೊಳಿಸಿ ಕಾರ್ಯವಿಧಾನವನ್ನು ರೂಪಿಸಿ ಕಿಯಾಸ್ಕ್ ಮಾಲೀಕರಿಗೆ ಸೂಚನೆ ನೀಡಿ ಅವರುಗಳ ಕಿಯಾಸ್ಕ್ ಮುಖಾಂತರ ಭೂ ದಾಖಲೆಗಳನ್ನು ರೈತರಿಗೆ ವಿತರಿಸಲಾಗುವುದು.

ಗೋವಾ ರಾಜ್ಯದಲ್ಲಿರುವ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಕಛೇರಿ

311(2674) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೋವಾ ರಾಜ್ಯದ ಪಣಜಿಯಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ಕಾರ್ಯ ನಿರ್ವಹಿಸುತ್ತಿದೆಯೇ; ಇದನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಈ ಇಲಾಖೆಯ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು;

ಇ) ಇಲಾಖೆಯ ಸ್ಥಾಪನೆಯ ಉದ್ದೇಶಗಳೇನು;

ಈ) ಪ್ರಸ್ತುತ ಇಲಾಖೆಯ ಅವ್ಯವಸ್ಥೆಯ ಬಗ್ಗೆ ಸರ್ಕಾರ ಗಮನ ಹರಿಸುವುದೇ;

ಉ) ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ಹೌದು-1965ರಲ್ಲಿ

ಅ) ಎರಡು

ಇ) ದೇಶಿಯ ಹಾಗೂ ವಿದೇಶಿಯ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಗೋವಾ ರಾಜ್ಯಕ್ಕೆ ಆಗಮಿಸುತ್ತಾರೆ. ಇವರಿಗೆ ಕರ್ನಾಟಕ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಅವರನ್ನು ಕರ್ನಾಟಕಕ್ಕೆ ಆಕರ್ಷಿಸುವುದು ಈ ಕಛೇರಿ ಸ್ಥಾಪನೆಯ ಮುಖ್ಯ ಉದ್ದೇಶವಾಗಿದೆ.

ಈ) ಸದರಿ ಕಛೇರಿಯು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿದೆ.

ಉ) ಉದ್ಭವಿಸುವುದಿಲ್ಲ.

ದಿನಾಂಕ 31/3/2003ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ

ಮಂಡ್ಯ ಜಿಲ್ಲಾ ಪ್ಯಾಕೇಜ್‌ನಲ್ಲಿ ಕೈಗೊಂಡ ಕಾಮಗಾರಿಗಳು

2196 (2669) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ (ಎಂ.ಸಿ. ರಸ್ತೆ) ಮಂಡ್ಯ ಜಿಲ್ಲೆಯ ಪರಿಮಿತಿಯಲ್ಲಿ ಇರುವ ಅಂತರದ ರಸ್ತೆಯನ್ನು ಪ್ರಸಕ್ತ "ಮಂಡ್ಯ ಜಿಲ್ಲಾ ಪ್ಯಾಕೇಜ್" ಅಡಿಯಲ್ಲಿ ಅಭಿವೃದ್ಧಿಗೊಳಿಸಲಾಗುತ್ತಾ ಇದೆಯೇ;

ಆ) ಹಾಗಿದ್ದಲ್ಲಿ, ಇದರ ವಿವರಗಳೇನು; ಈ ಅಭಿವೃದ್ಧಿ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು;

ಇ) ಬೆಂಗಳೂರು-ಮೈಸೂರು ಮಧ್ಯದ ರಸ್ತೆಯಲ್ಲಿ ಮಂಡ್ಯ ನಗರದ ಹತ್ತಿರವಿರುವ ಹೆಬ್ಬಾಳದ ಮೇಲಿನ ಸೇತುವೆ, ಹಲಿಯೂರು ಸರ್ಕಲ್ ಬಳಿಯ ಕಾವೇರಿ ಶಾಖಾ ನಾಲೆಯ ಮೇಲಿನ ಸೇತುವೆ ಹಾಗೂ ಮದ್ದೂರು ಗೆಜ್ಜಲಗೆರೆ ಮಧ್ಯೆ ಇರುವ 23ನೇ ನಾಲೆಯ ಮೇಲಿನ ಸೇತುವೆ ಇವು ಕಿರಿದಾಗಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಈ ಸೇತುವೆಗಳನ್ನು ಅಗಲಗೊಳಿಸಿ ಬಲಪಡಿಸುವ ಅವಶ್ಯಕತೆಯನ್ನು ಸರ್ಕಾರ ಗಮನಿಸಿದೆಯೇ;

ಈ) ಗಮನಿಸಿದ್ದಲ್ಲಿ, ಸರ್ಕಾರವು ಈ ಬಗೆಗೆ ಕೈಗೊಳ್ಳುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹೌದು.

ಆ) ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಹಾದು ಹೋಗುವ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿ ನಂ. 17ರ ಸರಪಳಿ 71.20 ಕಿಮೀ ನಿಂದ 131.00 ಕಿಮೀ ವರೆಗೆ "ಮಂಡ್ಯ ಜಿಲ್ಲಾ ಪ್ಯಾಕೇಜ್" ಯೋಜನೆಯಡಿಯ ಪ್ರಥಮ ಹಂತದಲ್ಲಿ ಕೈಗೊಂಡಿದೆ. ಸದರಿ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ರೂ. 766.00 ಲಕ್ಷ ಮೊತ್ತ ಮಂಜೂರಾಗಿದೆ.

ಇ) ಹೌದು.

ಈ) ಈ ಸೇತುವೆಗಳನ್ನು ಕೆ.ಆರ್.ಡಿ.ಸಿ.ಎಲ್. ಮತಿಯಿಂದ ತೆಗೆದುಕೊಳ್ಳಲಾಗುವ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆಯಲ್ಲಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಉದ್ಯೋಗ : ಉನ್ನತ ಶಿಕ್ಷಣದಲ್ಲಿ ಮೀಸಲಾತಿ

2197 (2670) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?